

ಕುದುರೆಯವರು ಮುತ್ತಿಕೊಂಡರು. ನಾಲ್ಕೈದು ಪಾಯಿಂಟ್‌ಗಳನ್ನು ತೋರಿಸುವುದಾಗಿಯೂ, ನಿಮ್ಮಿಂದಲೇ ತಮ್ಮ ಹೊಟ್ಟೆಪಾಡೆಂತಲೂ ಪರಿಪರಿಯಾಗಿ ಕಾಡತೊಡಗಿದರು. ನಮ್ಮಲ್ಲಿ ಕೆಲವರು ಸವಾರಿ ಹೊರಟರು.

ದೂಧ್ ಗಂಗಾ ನದಿ ಹತ್ತು ಕಿಲೋಮೀಟರ್ ಆಗುತ್ತೆ, ಕುದುರೆಯಿಲ್ಲದೆ ಅಲ್ಲಿಗೆ ಹೋಗುವುದು ಸಾಧ್ಯವೇ ಇಲ್ಲ ಎಂದೊಬ್ಬ ಹೇಳಿದ್ದ. ನಾವು ಕೆಲವರು ನಡೆದು ಹೋದಾಗ ಅದು ಒಂದೂವರೆ ಕಿ.ಮೀ. ಮಾತ್ರವಿತ್ತು! ಸವಾರಿಗೆ ಹೋದ ನಮ್ಮವರು ಒಬ್ಬೊಬ್ಬರು ಒಂದೊಂದು ದರ ತೆತ್ತಿದ್ದರು.

ಹಿಮಾಲಯದ 'ಪಿರ್ ಪಂಜಾಲ್' ಪರ್ವತ ಶ್ರೇಣಿಯ ಬಟ್ಟಲಿನಾಕಾರದ ಕಣಿವೆಯಲ್ಲಿ ದೂಧ್ ಪತ್ರಿಯಿದೆ. ದೇವದಾರು, ಪೈನ್ ಮತ್ತು ಫಿರ್ ಮರಗಳಿರುವ ಆಲ್ಪೈನ್ ಕಣಿವೆ, ಸುತ್ತಲೂ ಅನೇಕ ಪರ್ವತ ಶಿಖರಗಳಿಂದ ಆವೃತವಾಗಿದೆ. ಚಳಿಗಾಲದಲ್ಲಿ ಮೈದಾನ ಮತ್ತು ಸುತ್ತಲಿನ ಬೆಟ್ಟಗಳು ಹಿಮಾವೃತವಾಗುತ್ತವೆ. ಬೇಸಿಗೆ ಮತ್ತು ವಸಂತ ಕಾಲದಲ್ಲಿ ಇಳಿಜಾರಾದ ಹಸುರು ಮೈದಾನವು ಅನೇಕ ಬಗೆಯ ಕಾಡು ಹೂಗಳಿಂದ ನಯನ ಮನೋಹರವಾಗಿ ಕಂಗೊಳಿಸುತ್ತದೆ. ಹಿಮಾಚಲ ಪ್ರದೇಶದ ಡಾಲ್ ಹೌಸಿಯನ್ನು 'ಮಿನಿ ಸ್ವಿಟ್ಜರ್‌ಲ್ಯಾಂಡ್' ಎಂದು ಕರೆಯುವಂತೆಯೇ, ದೂಧ್ ಪತ್ರಿಯನ್ನೂ 'ಭಾರತದ ಸ್ವಿಸ್' ಎಂದು ಕರೆಯಲಾಗುತ್ತದೆ.

ಈ ಸ್ಥಳಕ್ಕೆ 'ದೂಧ್ ಪತ್ರಿ' ಎಂಬ ಹೆಸರು ಹೇಗೆ ಬಂದಿತು? ಹೆಸರಿಗೆ ತಳುಕು ಹಾಕಿಕೊಂಡ ಪುರಾಣ ಕಥೆಯೊಂದಿದೆ. ಕಾಶ್ಮೀರದ ಸಂತ ಶೇಖ್ ಉಲ್ ಆಲಮ್ ಶೇಖ್ ನೂರ್ ದಿನ್ ನೂರಾನಿ ದೂಧ್ ಪತ್ರಿಯಲ್ಲಿ ಪ್ರಾರ್ಥನೆ ಮಾಡಿದ್ದಾಗಿ ಕಥೆ ಹೇಳುತ್ತದೆ. ಇಲ್ಲಿನ ಹಸುರು ಮೈದಾನದಲ್ಲಿ, ಪ್ರಾರ್ಥನೆಗೆ ಮುನ್ನ ನೀರನ್ನು ಶೋಧಿಸುತ್ತಾ ತನ್ನಲ್ಲಿದ್ದ ಕೋಲಿನಿಂದ ನೆಲಕ್ಕೆ ಚುಚ್ಚಲು, ಹಾಲಿನ ಧಾರೆ ಹೊರಬಂದಿತಂತೆ. ಆಗ ಆತ ಹಾಲನ್ನು ಕುರಿತು 'ನಿನ್ನನ್ನು ಆಹಾರವಾಗಿ ಸೇವಿಸಬಹುದೇ ಹೊರತು ಶರೀರ ಶುದ್ಧಿಗೆ ಬಳಸಲಾಗುವುದಿಲ್ಲವಲ್ಲ' ಎಂದನಂತೆ.

ಆಗ ಆ ಹಾಲಿನ ಧಾರೆ ನೀರಾಗಿ ಪರಿವರ್ತನೆಗೊಂಡಿತಂತೆ. ನಂತರ ಈ ಸ್ಥಳಕ್ಕೆ 'ದೂಧ್ ಪತ್ರಿ' ಎಂಬ ಹೆಸರು ಬಂದಿತು ಎನ್ನಲಾಗಿದೆ. ಇಲ್ಲಿ ಬಂಡೆಗಳ ನಡುವೆ ಹರಿವ ನೀರು ದೂರದಿಂದ ಹಾಲಿನಂತೆ ಕಾಣುವುದರಿಂದ ಹಳ್ಳಕ್ಕೆ 'ದೂಧ್ ಗಂಗಾ' (ಶಾಲಿ ಗಂಗಾ ಎಂಬ ಹೆಸರೂ ಇದೆ) ಎಂದು ಕರೆಯಲಾಗುತ್ತದೆ. ವರ್ಷವಿಡೀ ಶೀತಲ ಜಲಧಾರೆಯು ಹರಿಯುತ್ತಲೇ ಇರುತ್ತದೆ.

ಸ್ವರ್ಗ ಸದೃಶ, ಮಂತ್ರಮುಗ್ಧಗೊಳಿಸುವ ಕನಸಿನ ಲೋಕ ಎನ್ನುವುದೆಲ್ಲಾ ಇಲ್ಲಿ ಕ್ಲೀಷೆ ಎನ್ನಿಸಿಬಿಡುತ್ತದೆ! ವರ್ಷದ ಆರು ತಿಂಗಳ ಕಾಲ ಮಾತ್ರ ಇಲ್ಲಿ ಜನರ ಚಟುವಟಿಕೆ. ಆಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರೂ ಬರುತ್ತಾರೆ. ಆ ನಾಲ್ಕಾರು ತಿಂಗಳುಗಳ ಕಾಲ, ಸುತ್ತಲ ಗ್ರಾಮಗಳ ಜನರಿಗೆ ತಮ್ಮ ದುಡಿಮೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಚಳಿಗಾಲದಲ್ಲಿ ಇಲ್ಲಿಗೆ ತಲುಪುವುದು ಕಷ್ಟ ಸಾಧ್ಯ.

ದೂಧ್ ಪತ್ರಿಯ ರಸ್ತೆ ಬದಿಯಲ್ಲಿ ಜೋಳದ ರೊಟ್ಟಿ, ಸಾಸಿವೆ ಮತ್ತು ಪಾಲಕ್ ಹಾಕಿ ಮಾಡಿದ ಗೊಜ್ಜು, ವಿಶೇಷ ಚಟ್ನಿಗಳು, ಉಪ್ಪಿನಕಾಯಿ, ಕಾಶ್ಮೀರಿ ಕಾವಾ (ಒಂದು ಬಗೆಯ ಕಷಾಯ), ಸಿಹಿ ಮತ್ತು ಉಪ್ಪಿನ ಚಹಾ (ನಮ್ಕೀನ್ ಚಾಯ್) ಇವನ್ನೆಲ್ಲಾ ಮಾರುತ್ತಾ ಸ್ಥಳೀಯರು ಕುಳಿತಿರುತ್ತಾರೆ. ರುಚಿ ನೋಡಲಡ್ಡಿಯಿಲ್ಲ. ಮರ ಮತ್ತು ಮಣ್ಣನ್ನು ಬಳಸಿ ಮಾಡಿದ ಗೋಡೆಗಳು ಹಾಗೂ ಚಾವಣಿಯನ್ನು ಹೊಂದಿದ ಕಾಟೇಜುಗಳು ಇಲ್ಲಿವೆ. ಒಳಗೆ ಮಲಗುವ ಸ್ಥಳ, ಅಡುಗೆಯ ಕೋಣೆಯನ್ನೂ ಇವು ಹೊಂದಿರುತ್ತವೆ.

ಮಧ್ಯಾಹ್ನದವರೆಗೂ ದೂಧ್ ಪತ್ರಿಯಲ್ಲಿ ಅವಿಸ್ಮರಣೀಯ ಕ್ಷಣಗಳನ್ನು ಕಳೆದು ಅಲ್ಲಿಂದ ಹೊರಟು, ಸ್ವಲ್ಪ ದೂರದಲ್ಲಿ ಬಸ್ ನಿಲ್ಲಿಸಿ ಊಟ ಮಾಡಿದೆವು. ಸೊಗಸಾದ ವನಭೋಜನವಾಯಿತು.

ಶ್ರೀನಗರವನ್ನು ವಿಮಾನ, ರೈಲು ಹಾಗೂ ರಸ್ತೆಯ ಮೂಲಕ ತಲುಪಬಹುದು. ಶ್ರೀನಗರದಲ್ಲಿಯೇ ವಿಮಾನ ನಿಲ್ದಾಣವಿದೆ. ಹತ್ತಿರದ ರೈಲು ನಿಲ್ದಾಣ ಜಮ್ಮು ತಾವಿ. ಜಮ್ಮುವಿನಿಂದ ರಾಷ್ಟ್ರೀಯ ಹೆದ್ದಾರಿ 1ಎ ಮೂಲಕ ಶ್ರೀನಗರ ತಲುಪಬಹುದು. ಸಾರ್ವಜನಿಕ ಸಾರಿಗೆ ಲಭ್ಯವಿಲ್ಲದಿರುವುದರಿಂದ ಶ್ರೀನಗರದಿಂದ ಬಾಡಿಗೆ ವಾಹನಗಳಲ್ಲಿಯೇ ದೂಧ್ ಪತ್ರಿಗೆ ಹೋಗಬೇಕಾಗುತ್ತದೆ. ಶ್ರೀನಗರ ಮತ್ತು ದೂಧ್ ಪತ್ರಿಯನ್ನು ಸಂದರ್ಶಿಸಲು ಫೆಬ್ರುವರಿಯಿಂದ ಜುಲೈ ಸೂಕ್ತ ಕಾಲ. ಹಿಮಪಾತದ ಅನುಭವ ಪಡೆಯಬೇಕೆಂದಿದ್ದಲ್ಲಿ ಚಳಿಗಾಲದಲ್ಲಿಯೂ ಹೋಗಬಹುದು.

ಒಂದೊಂದು ಋತುವಿನಲ್ಲಿಯೂ ತನ್ನ ಒಂದೊಂದು ರೂಪವನ್ನು ತೋರುವುದೇ ದೂಧ್ ಪತ್ರಿಯ ವಿಶೇಷ.

ಪ್ರತಿಕ್ರಿಯಿಸಿ: **feedback@sudha.co.in**